ದಿನಾಂಕ:04.04.2020ರಂದು ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ವೀಡಿಯೋ ಕಾನ್ಫರೆನ್ಸ್‌ನಲ್ಲಿ ದಿನಾಂಕ:05.04.2020ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳು ಸೂಚಿಸಿರುವಂತೆ ರಾತ್ರಿ 9 ಗಂಟೆಗೆ ಪ್ರಾರಂಭಿಸಿ 9 ನಿಮಿಷಗಳವರೆಗೆ ಕ್ಯಾಂಡಲ್, ದೀಪ ಅಥವಾ ಮೊಬೈಲ್ ಟಾರ್ಚ್‌ಲೈಟ್ ಮೂಲಕ ಬೆಳಕನ್ನು ಬೆಳಗಿಸಿ ಕೋವಿಡ್–19 ವಿರುದ್ಧ ಎಲ್ಲಾ ದೇಶಜನರ ಐಕ್ಯಮತ್ಯವನ್ನು, ದೇಶೀಯರಲ್ಲಿ ಸಮನ್ವಯ ಮತ್ತು ಸಹಕಾರವನ್ನು, ನಾವೆಲ್ಲರೂ ಒಂದು ಎಂಬ ಭಾವನೆಯನ್ನು ವ್ಯಕ್ತಪಡಿಸುವ ಸಲುವಾಗಿ ಕಾರ್ಯಕ್ರಮವನ್ನು ಅನುಪಾಲಿಸಲು ಸೂಚಿಸಿದ್ದು ಈ ಕುರಿತು ಕೆಳಕಂಡ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

1) ಯಾವುದೇ ಕಾರಣಕ್ಕೂ ಮಕ್ಕಳು ಗುಂಪು ಗುಂಪಾಗಿ ಸೇರದಂತೆ ನೋಡಿಕೊಳ್ಳುವುದು. ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಕಡ್ಡಾಯವಾಗಿ ಕನಿಷ್ಠ ಒಂದು ಮೀಟರ್ ಅಂತರವಿರಬೇಕು.
2) ಮಕ್ಕಳೆಲ್ಲಾ ಕಾಟನ್ ವಸ್ತ್ರಗಳನ್ನು ಧರಿಸಿರಬೇಕು.
3) ಸಿಬ್ಬಂದಿಗಳಾಗಲಿ ಅಥವಾ ಮಕ್ಕಳಾಗಲಿ ಯಾರೂ ಸಹ ದೀಪ ಬೆಳಗಿಸುವ ಸಮಯದಲ್ಲಿ ಕೈಗಳಿಗೆ ಸ್ಯಾನಿಟೈಜರ್ ಬಳಸಬಾರದು. ನೀರು ಮತ್ತು ಸಾಬೂನಿನಿಂದ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಯಾರ ಕೈಗಳಲ್ಲಿಯೂ ಸ್ಯಾನಿಟೈಜರ್ ಇಲ್ಲದಂತೆ ನೋಡಿಕೊಳ್ಳುವುದು.
4) ತುರ್ತು ಸಂದರ್ಭಕ್ಕಾಗಿ ದೀಪ ಬೆಳಗಿಸುವ ಆವರಣದಲ್ಲಿ ಸಾಕಷ್ಟು ಬಕೆಟ್‌ಗಳಲ್ಲಿ ತಣ್ಣನೆಯ ನೀರನ್ನು ಸಂಗ್ರಹಿಸಿಟ್ಟಿರುವುದು.
5) ಯಾವುದೇ ಕಾರಣಕ್ಕೂ ಮಕ್ಕಳನ್ನು ಫೋಟೋ ಅಥವಾ ವೀಡಿಯೋ ತೆಗೆಯುವ ಸಲುವಾಗಿ ಒಂದುಕಡೆ ಸೇರಿಸಬಾರದು. ಯಾವುದೇ ಜಿಲ್ಲೆಯಲ್ಲಿ ಮಕ್ಕಳ ನಡುವಿನ ಅಂತರ ಉಲ್ಲಂಘನೆಯಾದಲ್ಲಿ, ಸದರಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.
6) ಈ ಎಲ್ಲಾ ಪ್ರಕ್ರಿಯೆಯನ್ನು ಕೊಠಡಿಗಳ ಹೊರಗಡೆ ಹೊರಾಂಗಣದಲ್ಲಿ **(Open Air and Under the Sky)** ನಲ್ಲಿ ಮಾತ್ರ ಮಾಡುವುದು.

05.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA